†ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).—ನೀವು ಕೇಳುತ್ತಾ ಇರತಕ್ಕ ಪ್ರಶ್ನೆ ಕೆಲವು ವರ್ಷಗಳ ಹಿಂದೆ ನಡೆದಂಥ ಘಟನೆಗೆ ಸಂಬಂಧಿಸಿದ್ದು. ಭದ್ರಾವತಿ ಐರನ್ ವರ್ಕ್ಸ್ ಪ್ರಾಡಕ್ಟ್ಸ್‌ನ್ನು ಹೊರಗಡೆಯವರಿಗೆ ಮಾರಾಟ ಮಾಡಲು ಕೊಡಬಾರದು ಎಂಬ ಅಭಿಪ್ರಾಯ ಮಾನ್ಯ ಸದಸ್ಯರಿಗೆ ಇದೆ. ಆ ಕಾಲದಲ್ಲಿ ನನಗೆ ಗೊತ್ತಿರುವ ಹಾಗೆ ಇದನ್ನು ಮಾರಾಟ ಮಾಡುವುದಕ್ಕೆ ಮಾರ್ಕೆಟ್ಟಿನಲ್ಲಿ ಸ್ವಲ್ಪ ಸಂದಿಗ್ಧ ಪರಿಸ್ಥಿತಿ ಇತ್ತು. ನಾವು ಸಾಧಾರಣವಾಗಿ ಎಲ್ಲಾ ಮಾರಾಟಗಳನ್ನು ನೇರವಾಗಿ ಮಾಡಬೇಕು ಎನ್ನುವ ನೀತಿಯನ್ನು ಒಪ್ಪಬಹುದಾದರೂ ಕೆಲವು ಸಂದರ್ಭಗಳಲ್ಲಿ ಮಾರ್ಕೆಟ್ಟಿನಲ್ಲಿ ಏರಿಳಿತದ ಕಾರಣ, ಮಾರ್ಕೆಟ್ಟಿನ ಪೂರ್ಣವಾದ ಹತೋಟಿ ಒಬ್ಬರ ಕೈಯಲ್ಲಿ ಇಲ್ಲದ ಕಾರಣ ಅಂಥ ಸನ್ನಿವೇಶಗಳಲ್ಲಿ ಮಧ್ಯವರ್ತಿ ಜನ ಇಟ್ಟು ಕೆಲಸ ಮಾಡಬೇಕಾದ ಸಂದರ್ಭ ಬರುತ್ತದೆ. ಕಬ್ಬಿಣಕ್ಕೆ ಪ್ರಾರಂಭದಲ್ಲಿ ಮಾರ್ಕೆಟ್ಟು ಇರಲಿಲ್ಲ. ಅಂಥ ಒಂದು ಸನ್ನಿವೇಶದಲ್ಲಿ ಬಹುಶಃ ಕಂಟ್ರಾಕ್ಟರುಗಳನ್ನು ಮಧ್ಯೆ ಇಟ್ಟುಕೊಂಡು ಅವರ ಮುಖೇಣ ಮಾರಾಟ ಆಗಿರತಕ್ಕದ್ದು ಇದು.

3-00 P.M.

ಶ್ರೀ ಎಚ್. ಡಿ. ದೇವೇ ಗೌಡ.—ಈಗ ಹನ್ನೊಂದು ಸಂಸ್ಥೆಗಳಿಗೆ ಹದಿನಾಲ್ಕು ಲಕ್ಷ ರೂಪಾಯಿಗಳ ಕಮಿಷನ್‌ನ್ನು ಕೊಟ್ಟಿದ್ದೀವೆ ಎಂದು ಹೇಳಿದ್ದೀರಿ; ತಮ್ಮದೇ ಆದಂಥ ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಸಂಸ್ಥೆ ಏನಿದೆ ಅದಕ್ಕೆ ಈ ಜವಾಬ್ದಾರಿಯನ್ನು ವಹಿಸಿ ಇಂತಹ ಒಂದು ಪ್ರೈವೇಟ್ ಏಜನ್ಸಿಯನ್ನು ತಪ್ಪಿಸುವುದಕ್ಕಾಗುವುದಿಲ್ಲವೆ? ಈಗ ಮೈಸೂರು ಇಂಟರ್ ನ್ಯಾಷನಲ್ ಲಾಟರಿ ವ್ಯವಹಾರ ಮಾಡುತ್ತಿದೆ; ಅದಕ್ಕೆ ಬದಲಾಗಿ ಈ ಒಂದು ಸಂಸ್ಥೆಗೆ ನೇರವಾಗಿ ಸ್ಟೀಲ್ ಮಾರಾಟ ಮಾಡುವ ಜವಾಬ್ದಾರಿಯನ್ನು ಕೊಡುವುದಕ್ಕೆ ಸಾಧ್ಯವೇ?

ಶ್ರೀ ಎಸ್. ಎಂ. ಕೃಷ್ಣ.—ಸ್ಪೆಷಲ್ ಸ್ಟೀಲ್ ಮಾರುವುದಕ್ಕೆ ಬಹಳ ಸ್ಪೆಷಲೈಸ್ಡ್ ಟೆಕ್ನಿಕ್ಸ್ ಬೇಕು. 1965ಕ್ಕೆ ಪ್ರಾರಂಭವಾಗಿ 1968ನೆಯ ಇಸವಿಯಲ್ಲಿ ಬಹಳ ತೀವ್ರತರವಾದ ಪೈಪೋಟಿಯನ್ನು ಸ್ಪೆಷಲ್ ಸ್ಟೀಲ್ ಏರಿಯಾದಲ್ಲಿ ಎದುರಿಸಬೇಕಾಗಿ ಬಂತು. ಆದ್ದರಿಂದ ನಾವು ಮೊಟ್ಟ ಮೊದಲನೆಯದಾಗಿ ಏಜನ್ಸಿಯ ಮೂಲಕ ನಮ್ಮ ಪ್ರಾಡಕ್ಟ್ಸುಗಳನ್ನು ಇಡೀ ದೇಶದಲ್ಲಿ ಮಾರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಈಗಲೂ ಸಹ ಇದು ತೀವ್ರವಾದ ಪೈಪೋಟಿಯನ್ನು ಖಾಸಗೀ ಉದ್ದಿಮೆದಾರರಿಂದ ಎದುರಿಸಬೇಕಾಗಿದೆ. ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಸಂಸ್ಥೆ ಏನಿದೆ ಅದೂ ಸಹ ಸ್ಟೀಲ್ ಏಜನ್ಸಿ ಪಡೆದು ಮಾರಬಹುದು ಎಂದು ನನ್ನ ಅಭಿಪ್ರಾಯ.

ಶ್ರೀ ಎಚ್. ಎಸ್. ಸಿದ್ದಪ್ಪ.—ನಾನು ತಮ್ಮನ್ನು ಮೊದಲೇ ಏಜೆಂಟರುಗಳು ಏನಿದ್ದಾರೆ ಅವರ ಇನ್‌ವೆಸ್ಟ್‌ಮೆಂಟ್ ಏನು ಅಂತ ಕೇಳಿದೆ, ಅದಕ್ಕೆ ಸರಿಯಾದ ಉತ್ತರ ದೊರಕಲಿಲ್ಲ. ಈ ವ್ಯಾಪಾರ ಏನು ನಡೆದಿದೆ ಅದಕ್ಕೆ ಕಂಪೆನಿಗಳು ಹಣವನ್ನು ತೊಡಗಿಸಿಲ್ಲ. ಬೇರೆಯವರಿಂದ ಪುಕ್ಕಟೆ ತೆಗೆದುಕೊಂಡು ತೊಡಗಿಸಿದ್ದಾರೆ. ಇದರ ಮೇಲೆ ಒಂದೂವರೆ, ಎರಡು ಪರ್ಸೆಂಟು ಬುಕ್ಕಿಂಗ್ ಕಮಿಷನ್ ಸಿಕ್ಕುತ್ತದೆ, ಇದು ಸರಿಯೇ?

ಶ್ರೀ ಎಸ್. ಎಂ. ಕೃಷ್ಣ.—ಯಾರನ್ನು ಏಜೆಂಟ್ಸ್ ಆಗಿ ಮಾಡುತ್ತೇವೆಯೋ ಅವರು ಮೊದಲು ಅಡಳಿತ ಮುಂಡಳಿಯ ಜೊತೆಗೆ ಡಿಪಾಜಿಟ್ ಇಡುತ್ತಾರೆ. ಮಿಕ್ಕ ಹಣಕ್ಕೆ ಬ್ಯಾಂಕ್ ಗ್ಯಾರಂಟಿ ಏನು ಒದಗಿಸುತ್ತಾರೆ, ಆ ಒಂದು ಆಧಾರದಮೇಲೆ ಬೇಕಾದಂಥ ಸಾಮಗ್ರಿಗಳನ್ನು ಕೊಡುತ್ತಾರೆ. ಇದು ನಡೆದುಕೊಂಡು ಬಂದಿರತಕ್ಕಂಥ ಪದ್ಧತಿ.

Completion of Upper Krishna Harangi, Hemavati and Kabini Projects

56. Sri H. D. DEVE GOWDA (Holenarsipur).—

Will the Minister of State for Major Irrigation be pleased to state :—

(*a*) the programme prepared for completion of Upper Krishna Project and the amount spent since 1968 ;

(SRI H. D. DEVE GOWDA)

(*b*) the programme prepared for Harangi, Hamavathi and Kabini Projects and when these projects are likely to be completed ;

(*c*) the outlay of each of these projects since 1968 ?

Sri H. N. NANJE GOWDA (Minister of State for Major Irrigation).—

(*a*) It is programmed to complete this project early. The outlay since 1968 year-wise is as below :—

1968-69 Rs. 80.26 lakhs.
1969-70 Rs. 217.55 lakhs.
1970-71 Rs. 310.88 lakhs.
1971-72 Rs. 500.49 lakhs.

(*b*) It is programmed to complete these projects within the next five years.

(*c*) The outlay incurred year-wise since 1968 is as below :—

Harangi

1968-69 Rs. 4.62 lakhs.
1969-70 Rs. 7.06 lakhs.
1970-71 Rs. 92.50 lakhs.
1971-72 Rs. 154.36 lakhs.

Hemavathy

1968-69 Rs. 73.01 lakhs.
1969-70 Rs. 226.07 lakhs.
1970-71 Rs. 412.90 lakhs.
1971-72 Rs. 576.63 lakhs.

Kabini

1968-69 Rs. 100.38 lakhs.
1969-70 Rs. 172.61 lakhs.
1970-71 Rs. 353.40 lakhs.
1971-72 Rs. 449.88 lakhs.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಅಪ್ಪರ್ ಕೃಷ್ಣ ಪ್ರಾಜೆಕ್ಟನ್ನು ಕಂಪ್ಲೀಟ್ ಮಾಡತಕ್ಕ ಬಗ್ಗೆ it is programmed to complete this project early ಎಂದು ಹೇಳಿದ್ದಾರೆ. 'ಅರ್ಲಿ' ಎಂದರೆ ಯಾವಾಗ? ಅಪ್ಪರ್ ಕೃಷ್ಣ ಪ್ರಾಜೆಕ್ಟನ್ನು ಪೂರ್ಣಗೊಳಿಸುವ ಬಗ್ಗೆ ನಿರ್ದಿಷ್ಟವಾದ ಕಾರ್ಯಕ್ರಮ ಏನಾದರೂ ಇದೆಯೇ ?

† ಶ್ರೀ ಎಚ್. ಎನ್. ನಂಜೇಗೌಡ.—ಅಪ್ಪರ್ ಕೃಷ್ಣ ಪ್ರಾಜೆಕ್ಟಿಗೆ ಇನ್ನೂ 203 ಕೋಟಿ 18 ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಈ ಕಾರಣದಿಂದ ನಿಖರವಾದ ಕಾಲಕ್ಕೆ ದುಡ್ಡನ್ನು ಒದಗಿಸುವುದಕ್ಕೆ ಕಷ್ಟವಿರುತ್ತದೆ ಎಂದು ತಿಳಿಸಿದೆ. ಸರ್ಕಾರಕ್ಕೆ ಇದನ್ನು ಬೇಗ ಮುಗಿಸಬೇಕು ಎನ್ನುವ ಆತುರವಿದೆ.

ಶ್ರೀ ಎಚ್. ಡಿ. ದೇವೇಗೌಡ.—ತಮಗೆ ಜ್ಞಾಪಕವಿರಬಹುದು, ಈ ಅಪ್ಪರ್ ಕೃಷ್ಣ ಯೋಜನೆಯನ್ನು ಪೂರ್ಣಗೊಳಿಸುವ ಬಗ್ಗೆ ಕಂಪ್ಲೀಟ್ ಆಗಿ ಕೇಂದ್ರ ಸರ್ಕಾರ ಹಣ ಸಹಾಯ ಮಾಡಬೇಕು ಮತ್ತು ವರ್ಲ್ಡ್ ಬ್ಯಾಂಕ್‌ನಿಂದ ಸಾಲ ತರಬೇಕು ಎಂದು ಈ ಸಭೆ ಒಂದು ನಿರ್ಣಯ ಮಾಡಿತ್ತು. ಇದನ್ನು ಕೇಂದ್ರ ಸರ್ಕಾರದವತಿಯಿಂದ ಕಾರ್ಯಗತ ಮಾಡುವುದಕ್ಕೆ ತಮ್ಮ ಸರ್ಕಾರ ಪ್ರಯತ್ನ ಮಾಡುತ್ತಿದೆಯೇ?

ಶ್ರೀ ಡಿ. ದೇವರಾಜ ಅರಸ್.—ನಿರ್ಣಯ ಮಾಡಿರಬಹುದು, ಅದು ರೆಕಾರ್ಡಿನಲ್ಲಿ ಇರುತ್ತದೆ. ನಾವು ನಿರ್ಣಯ ಮಾಡಿದ ಕೂಡಲೇ ಕೇಂದ್ರ ಸರ್ಕಾರದ ನೀತಿ ಅಷ್ಟು ಸುಲಭವಾಗಿ ಬದಲಾವಣೆ ಯಾಗುವುದಿಲ್ಲ. ಪಂಚವಾರ್ಷಿಕ ಯೋಜನೆಯಲ್ಲಿ ಹಣ ಒದಗಿಸಬೇಕಾದರೆ ಒಂದು ನೀತಿಯನ್ನು ಅನುಸರಿಸಿಕೊಂಡು ಬರುತ್ತಿದ್ದಾರೆ. ದೊಡ್ಡ ದೊಡ್ಡ ಜಲಾಶಯಗಳ ನಿರ್ಮಾಣ ಏನು ಇದೆ, ಆ ನಿರ್ಮಾಣದ ಬಗ್ಗೆ ಹಾಲಿ ಕೇಂದ್ರ ಸರ್ಕಾರದ ನೀತಿ ಹೀಗಿದೆ; ಯಾವ ಜಲಾಶಯಗಳಿಗೆ ಕೇಂದ್ರ ಸರ್ಕಾರ ತಾಂತ್ರಿಕವಾಗಿ ಒಪ್ಪಿಗೆಯನ್ನು ಕೊಟ್ಟಿರುತ್ತದೋ ಅಂಥವಕ್ಕೆ ಮಾತ್ರ ನಮ್ಮ ಪಂಚವಾರ್ಷಿಕ ಯೋಜನೆಯಲ್ಲಿ ಹಣ ಒದಗಿಸಿಕೊಡುತ್ತಾರೆ. ಹಾಗೂ ಇದರಲ್ಲಿ ಇನ್ನೊಂದು ವಿಚಾರ ಏನೆಂದರೆ, ಒಂದು ರಾಜ್ಯದ ಪಂಚವಾರ್ಷಿಕ ಯೋಜನೆಯ ಒಟ್ಟು ಮೊತ್ತ ಇಷ್ಟು ಎಂದು ನಿಗದಿ ಮಾಡುತ್ತಾರೆ. ನಿಗದಿಯಾದ ಮೊತ್ತದೊಳಗೆ ನಾವು ದೊಡ್ಡ ಜಲಾಶಯಗಳಿಗೆ ಅಷ್ಟು ಕೊಡಬೇಕು, ಸಣ್ಣದಕ್ಕೂ ಖರ್ಚುಮಾಡಬೇಕು, ಅಲ್ಲದೆ ಬೇರೆ ಬೇರೆ ವಿಭಾಗಗಳಿಗೂ ಖರ್ಚು ಮಾಡಬೇಕು. ಈ ಖರ್ಚು ನಿಗದಿಯಾದ ಒಟ್ಟು ಮೊತ್ತಕ್ಕಿಂತ ಹೆಚ್ಚಿಗೆ ಹೋಗುವುದಿಲ್ಲ. ಈ ಕಾರಣದಿಂದ ಕೇಂದ್ರ ಸರ್ಕಾರದವರು ನೇರವಾಗಿ ಇಂತಹ ಜಲಾಶಯಗಳ ನಿರ್ಮಾಣಕ್ಕೆ ದುಡ್ಡು ಕೊಡತಕ್ಕಂಥಾದ್ದು ಕೆಲವು ವಾಪ್ತಿಗಳಿಗೆ ಒಳಪಟ್ಟಿದೆ. ಈ ನಭೆಯ ಮತ್ತು ಮಾನ್ಯ ಸದಸ್ಯರ ಕುತೂಹಲ ನೆನಗೆ ಅರ್ಥವಾಗುತ್ತದೆ. ಇತ್ತೀಚೆಗೆ ಕೇಂದ್ರ ಸರ್ಕಾರದ ನೀತಿ ಬದಲಾವಣೆ ಮಾಡಬೇಕು ಎಂದು ನಾವು ಕೂಡ ಒತ್ತಾಯ ಮಾಡುತ್ತಿದ್ದೇವೆ. ನ್ಯಾಚುರಲ್ ರಿಸೋರ್ಸ್‌ಸ್ ಅಂದರೆ ನೀರು, ವಿದ್ಯುಚ್ಛಕ್ತಿ ಇತ್ಯಾದಿ ಏನಿದೆ ಇದನ್ನೆಲ್ಲಾ ಉಪಯೋಗ ಮಾಡುವುದಕ್ಕೆ ನಾಳೆ ಬರತಕ್ಕಂಥ ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೆಲವು ಮೂಲಭೂತವಾದ ಬದಲಾವಣೆಗಳನ್ನು ಮಾಡಬೇಕು ಎಂದು ಒತ್ತಾಯ ಮಾಡುತ್ತಿದ್ದೇವೆ. ಆ ಬದಲಾವಣೆಯ ಪ್ರಕಾರ ಐದನೆಯ ಪಂಚವಾರ್ಷಿಕ ಯೋಜನೆಗಳನ್ನು ಎರಡು ಭಾಗವಾಗಿ ಇಡಬೇಕು. ಅಭಿವೃದ್ಧಿ ಕಾರ್ಯಗಳು ಎಂದರೆ, ಮೈನರ್ ಇರಿಗೇಷನ್, ರೋಡು ಫಾರ್ಮೇಷನ್, ಬಿಲ್ಡಿಂಗ್ ಕಟ್ಟತಕ್ಕದ್ದು, ವಿದ್ಯಾಭ್ಯಾಸ ಒಂದು ಭಾಗ. ರಿಸೋರ್ಸ್‌ಸ್ ಡೆವಲಪ್‌ಮೆಂಟ್ ಎರಡನೆಯ ಭಾಗ ಈ ರೀತಿ ಎರಡು ಭಾಗ ಮಾಡಿ ಅದಕ್ಕೆ ಹಣ ಒದಗಿಸತಕ್ಕಂಥಾದ್ದು. ಇದುವರೆಗೂ ಒದಗಿಸಿದ ರೀತಿಯನ್ನು ಬಿಟ್ಟು ಇನ್ನೊಂದು ಬೇರೆ ಹೊಸ ಮಾರ್ಗವನ್ನು ಹುಡುಕಿ ಹೆಚ್ಚು ಹೆಚ್ಚು ಹಣವನ್ನು ಯಾವ ಮುಖೇನವಾದರೂ, ಅಂದರೆ ವರ್ಲ್ಡ್ ಬ್ಯಾಂಕ್ ಮುಖಾಂತರವಾಗಲಿ ಅಥವಾ ಹೊರಗಡೆಯಿಂದ ಹಣ ತರತಕ್ಕದ್ದು ಮತ್ತು ಇಂಟರನಲ್ ರಿಸೋರ್ಸ್‌ಸ್ ಮಾನಲಾಗಿಡತಕ್ಕದ್ದು. ಈಗ ಒಟ್ಟಿನಲ್ಲಿ 25 ವರ್ಷಗಳು ಕಳೆದಿವೆ, ಇನ್ನಾದರೂ ಕೂಡ ಬೇಗ ಬೇಗ ನಮ್ಮ ನಿಸರ್ಗ ಸಂಪತ್ತನ್ನು ಉಪಯೋಗ ಮಾಡಿಕೊಳ್ಳಬೇಕಾಗಿದೆ. ಈ ಪಂಚವಾರ್ಷಿಕ ಯೋಜನೆಯಲ್ಲಿ ಇನ್ನುಮೇಲೆ 10 ವರ್ಷಗಳಲ್ಲಿ ಅದರೂ ಜಲ ಸಂಪತ್ತನ್ನು ಪೂರ್ಣವಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ ಬೇಕಾದಂಥ ಹಣವನ್ನು ಯಾವ ರೀತಿಯಲ್ಲಾದರೂ ಕೇಂದ್ರ ಸರ್ಕಾರ ಜವಾಬ್ದಾರಿ ವಹಿಸಿಕೊಂಡು ಒದಗಿಸಿ ನಮ್ಮಲ್ಲಿರತಕ್ಕ ಜಲಸಂಪತ್ತನ್ನು ನಮ್ಮ ರಾಜ್ಯಕ್ಕೆ ಉಪಯೋಗಿಸಿಕೊಳ್ಳುವಂತೆ ಅವಕಾಶ ಮಾಡಿಕೊಡಬೇಕಾಗಿ ಒತ್ತಾಯ ಮಾಡುತ್ತಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಕಾವೇರಿ ಬೇಸಿನಲ್ಲಿರತಕ್ಕ ಪ್ರಾಜೆಕ್ಟ್‌ಗಳ ಬಗ್ಗೆ 1974ಕ್ಕೆ ಆಗ್ರಿಮೆಂಟ್ ಪೀರಿಯಡ್ ಮುಗಿಯುತ್ತದೆ, ಪುನಃ ರಿವಿಷನ್ ಬರುತ್ತದೆ ಎನ್ನುವುದರ ಬಗ್ಗೆ ತಮಗೆ ಹೆಚ್ಚು ಪರಿಶ್ರಮ ಏದೆ. ಇವತ್ತು ನಮ್ಮ ಮುಂತ್ರಿಗಳು ಕೊಟ್ಟಿರತಕ್ಕ ಉತ್ತರದಲ್ಲಿ ಪ್ರಾಜೆಕ್ಟ್ ಮುಗಿಸುವುದಕ್ಕೆ ಐದು ವರ್ಷಗಳು ಬೇಕಾಗುತ್ತದೆ ಎಂದು ಹೇಳಿದ್ದಾರೆ. ಆದರೆ ಇನ್ನು ಎರಡು ವರ್ಷಗಳು ಮಾತ್ರ ನಮ್ಮ ಮುಂದಿವೆ. ಕಾವೇರಿ ಬೇಸಿನಲ್ಲಿರತಕ್ಕ ಪ್ರಾಜೆಕ್ಟ್‌ಗಳಿಗೆ ಸರ್ಕಾರ ಎಷ್ಟೇ ಹಣದ ಅಭಾವನ್ನು ಎದುರಿಸಿದರೂ ಆದಷ್ಟು ಹಣವನ್ನು ಒದಗಿಸಿ ಈ ಎರಡು ವರ್ಷಗಳಲ್ಲಿ ನೀರನ್ನು ತಡೆ ಹಿಡಿಯುವುದಕ್ಕೆ ಆಸ್ಥೆವಹಿಸುತ್ತಾರೆ ಎಂದು ನಾವು ನಿರೀಕ್ಷಿಸಬಹುದೇ?

ಶ್ರೀ ಡಿ. ದೇವರಾಜ ಅರಸ್.—ನಿರೀಕ್ಷಿಸಬಹುದು. I entirely agree with you. We will make all efforts.